# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1072 |
| ಸದಸ್ಯರ ಹೆಸರು | : | ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮ ನಿರ್ದೇಶನ ಹೊಂದಿದವರು) |
| ಉತ್ತರಿಸುವ ದಿನಾಂಕ | : | 18.12.2024 |
| ಉತ್ತರಿಸುವ ಸಚಿವರು | : | ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯ ಸರ್ಕಾರ ಕೇಂದ್ರ ಪುರಸ್ಕೃತ ಅಮೃತ ಸ್ವಾಭಿಮಾನಿ ಕುರಿಗಾಹಿ ಯೋಜನೆ ಮತ್ತು ಕುರಿ ಮೇಕೆ ಸಾಕಾಣಿಕೆ ಯೋಜನೆಯನ್ನು ಜಾರಿಗೊಳಿಸಲಾಗುತ್ತಿದೆಯೇ; ಹಾಗಿದ್ದಲ್ಲಿ, ಈ ಯೋಜನೆಗಳ ರೂಪ-ರೇಷೆಗಳು ಯಾವುವು; (ಪೂರ್ಣ ಮಾಹಿತಿ ನೀಡುವುದು) | ಸರ್ಕಾರದ ಆದೇಶ ಸಂಖ್ಯೆ: ಇ ಪಸಂಮೀ 78 ಪಪಾಯೋ 2022, ದಿನಾಂಕ: 22.02.2023ರ ಆದೇಶದನ್ವಯ ಅಮೃತ ಸ್ವಾಭಿಮಾನಿ ಕುರಿಗಾಹಿ ಯೋಜನೆಯನ್ನು ರಾಜ್ಯದಲ್ಲಿರುವ ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘಗಳ ಅರ್ಹ 20000 ಸದಸ್ಯರುಗಳಿಗೆ 20+1 ಕುರಿ/ಮೇಕೆ ಘಟಕಗಳನ್ನು ರೂ.354.50 ಕೋಟಿಗಳ ವೆಚ್ಚದಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸಲು ಆದೇಶಿಸಲಾಗಿರುತ್ತದೆ. ಅದರಂತೆ 2023-24ನೇ ಸಾಲಿನಲ್ಲಿ 6650 ಫಲಾನುಭವಿಗಳನ್ನು ಆಯ್ಕೆ ಮಾಡಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿರುತ್ತದೆ.<br><br>2024-25ನೇ ಸಾಲಿನಲ್ಲಿ ನವೆಂಬರ್-2024 ರ ಅಂತ್ಯಕ್ಕೆ 1156 ಫಲಾನುಭವಿಗಳನ್ನು ಆಯ್ಕೆ ಮಾಡಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿರುತ್ತದೆ. ಈ ಯೋಜನೆಯ ರೂಪುರೇಷೆಗಳನ್ನು **ಅನುಬಂಧ-1** ರಲ್ಲಿ ನೀಡಿದೆ. |
| ಆ | ರಾಜ್ಯದಲ್ಲಿ ಆರ್ಥಿಕವಾಗಿ ಹಿಂದುಳಿದಿರುವ ಕುಟುಂಬದವರಿಗೆ ಈ ಮೇಲಿನ ಯೋಜನೆಗಳ ಅಡಿಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ದೊರೆಯುವ ಸೌಲಭ್ಯಗಳು ಯಾವುವು; (ಪೂರ್ಣ ಮಾಹಿತಿ ನೀಡುವುದು) | ಅಮೃತ ಸ್ವಾಭಿಮಾನಿ ಕುರಿಗಾಹಿ ಯೋಜನೆಯ 20+1 ಕುರಿ/ಮೇಕೆ ಘಟಕದ ವೆಚ್ಚ ರೂ.1,75,000/- ಇದರಲ್ಲಿ ರಾಜ್ಯ ಸರ್ಕಾರದ ವತಿಯಿಂದ ಶೇ.25% (ರೂ.43,750/- ಸಹಾಯಧನ), ಶೇ.50% ರೂ.87,500/- (ರಾಷ್ಟ್ರೀಯ ಸಹಕಾರ ಅಭಿವೃದ್ಧಿ ನಿಗಮದ NCDC ವತಿಯಿಂದ ಸಾಲ) ಹಾಗೂ ಶೇ.25% (ರೂ.43,750/- ಫಲಾನುಭವಿಯ ವಂತಿಕೆ) ನೀಡಲಾಗುತ್ತಿದೆ **ಅನುಬಂಧ-2** ರಲ್ಲಿ ಪೂರ್ಣ ಮಾಹಿತಿ ನೀಡಿದೆ. |
| ಇ | ರಾಜ್ಯದಲ್ಲಿ ಅಮೃತ ಸ್ವಾಭಿಮಾನಿ ಕುರಿಗಾಹಿ ಯೋಜನೆ ಮತ್ತು ಕುರಿ-ಮೇಕೆ ಸಾಕಾಣಿಕೆ ಯೋಜನೆಗಳ ಅನುಷ್ಠಾನಕ್ಕೆ ಬೇಕಾಗಿರುವ ವ್ಯವಸ್ಥೆ ಯಾವುದು; (ಪೂರ್ಣ ಮಾಹಿತಿ ನೀಡುವುದು) | ಅಮೃತ ಸ್ವಾಭಿಮಾನಿ ಕುರಿಗಾಹಿ ಯೋಜನೆಯ ಅನುಷ್ಠಾನಕ್ಕೆ ಜಿಲ್ಲಾ ಮಟ್ಟದ ಫಲಾನುಭವಿ ಆಯ್ಕೆ ಸಮಿತಿಯ ಅವಶ್ಯಕತೆಯಿರುತ್ತದೆ. ವಿವರಗಳನ್ನು **ಅನುಬಂಧ-3** ರಲ್ಲಿ ನೀಡಿದೆ. |

| | | |
|---|---|---|
| ಈ | ಮೇಲಿನ ಯೋಜನೆಗಳನ್ನು ಯಾವ ಯಾವ ಬ್ಯಾಂಕ್ ಮುಖೇನ ಅನುಷ್ಠಾನಗೊಳಿಸಲಾಗುತ್ತಿದೆ; ಮತ್ತು ಕಳೆದ 5 ವರ್ಷಗಳಲ್ಲಿ ಸ್ವೀಕರಿಸಿದ ಅರ್ಜಿಗಳ ಸಂಖ್ಯೆ ಎಷ್ಟು ಮತ್ತು ಎಷ್ಟು ಅರ್ಜಿಗಳಿಗೆ ಮಂಜೂರಾತಿ ದೊರೆತಿದೆ ಹಾಗೂ ನೀಡಿರುವ ಸಾಲ-ಸಹಾಯಧನ ಸೌಲಭ್ಯಗಳು ಎಷ್ಟು;<br>(ಪೂರ್ಣ ಮಾಹಿತಿ ನೀಡುವುದು) | ಅಮೃತ ಸ್ವಾಭಿಮಾನಿ ಕುರಿಗಾಹಿ ಯೋಜನೆಯನ್ನು ರಾಷ್ಟ್ರೀಕೃತ ಬ್ಯಾಂಕ್‌ಗಳು, ವಾಣಿಜ್ಯ ಬ್ಯಾಂಕ್ ಹಾಗೂ ಸಹಕಾರಿ ಸಂಘಗಳ ಮುಖಾಂತರ ಸಾಲ ಮಂಜೂರಾತಿ ಹಾಗೂ ಸಹಾಯಧನ ಬಿಡುಗಡೆಗೊಳಿಸಲಾಗುವುದು.<br><br>ಈ ಯೋಜನೆಯು 2023-24ನೇ ಸಾಲಿನಿಂದ ಪ್ರಾರಂಭವಾಗಿದ್ದು, ಹಾಗಾಗಿ 2023-24ನೇ ಸಾಲಿನಿಂದ ಮಾತ್ರ ಅರ್ಜಿಗಳನ್ನು ಸ್ವೀಕರಿಸಲಾಗುತ್ತಿದೆ.<br><br>2023-24ನೇ ಸಾಲಿನಲ್ಲಿ 6650 ಅರ್ಜಿಗಳು ಸ್ವೀಕೃತವಾಗಿದ್ದು, ಇದರಲ್ಲಿ 6650 ಫಲಾನುಭವಿಗಳನ್ನು ಆಯ್ಕೆ ಮಾಡಿ ಸಹಾಯಧನ/ಸಾಲವನ್ನು ಬಿಡುಗಡೆಗೊಳಿಸಿ ಯೋಜನೆ ಅನುಷ್ಠಾನಗೊಳಿಸಲಾಗಿರುತ್ತದೆ. (ಜಿಲ್ಲಾವಾರು ಪ್ರಗತಿ ಪಟ್ಟಿ **ಅನುಬಂಧ-4** ರಲ್ಲಿ ನೀಡಿದೆ)<br><br>2024-25ನೇ ಸಾಲಿನಲ್ಲಿ ನವೆಂಬರ್-2024ರ ಅಂತ್ಯಕ್ಕೆ 1156 ಅರ್ಜಿಗಳು ಸ್ವೀಕೃತವಾಗಿದ್ದು, ಇದರಲ್ಲಿ 1156 ಫಲಾನುಭವಿಗಳನ್ನು ಆಯ್ಕೆ ಮಾಡಿ ಸಹಾಯಧನ/ಸಾಲವನ್ನು ಬಿಡುಗಡೆಗೊಳಿಸಿ ಯೋಜನೆ ಅನುಷ್ಠಾನಗೊಳಿಸಲಾಗಿರುತ್ತದೆ (ಜಿಲ್ಲಾವಾರು ಪ್ರಗತಿ ಪಟ್ಟಿ **ಅನುಬಂಧ-5** ರಲ್ಲಿ ನೀಡಿದೆ). |
| ಉ | ಸದರಿ ಯೋಜನೆಗಳ ಅನುಷ್ಠಾನಕ್ಕೆ ರೂಪಿಸಿರುವ ರಾಜ್ಯ ಮಟ್ಟದ ಸಮಿತಿ ಕಾರ್ಯವೈಖರಿಗಳು ಯಾವುವು; ಮತ್ತು ಈ ಸಮಿತಿ ಇದುವರೆಗೂ ಎಷ್ಟು ಸಭೆಗಳನ್ನು ನಡೆಸಿದೆ; ಹಾಗೂ ಈ ಸಮಿತಿ ಮುಂದೆ ಎಷ್ಟು ಪ್ರಕರಣಗಳು ಇತ್ಯರ್ಥವಾಗದೆ ಬಾಕಿ ಉಳಿದಿವೆ?<br>(ಪೂರ್ಣ ಮಾಹಿತಿ ನೀಡುವುದು) | ಅಮೃತ ಸ್ವಾಭಿಮಾನಿ ಕುರಿಗಾಹಿ ಯೋಜನೆಗೆ ರಾಜ್ಯಮಟ್ಟದ ಸಮಿತಿ ಇರುವುದಿಲ್ಲ. ಆದರೆ ಸದರಿ ಯೋಜನೆಯ ಅನುಷ್ಠಾನ, ಮೇಲ್ವಿಚಾರಣೆ ಮತ್ತು ಅನುಸರಣೆಗಾಗಿ ನಿರ್ದೇಶಕರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು ಇವರನ್ನು ರಾಜ್ಯಮಟ್ಟದ ನೋಡಲ್ ಅಧಿಕಾರಿಯನ್ನಾಗಿ ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯವರು ನೇಮಿಸಿರುತ್ತಾರೆ. ರಾಜ್ಯಮಟ್ಟದ ನೋಡಲ್ ಅಧಿಕಾರಿಯವರು ಯೋಜನೆಯ ಅನುಷ್ಠಾನದ ಮೇಲ್ವಿಚಾರಣೆ ಅನುಸರಣೆ ಮತ್ತು ಕಾಲಕಾಲಕ್ಕೆ ಸಾಲ ವಸೂಲಾತಿ ಬಗ್ಗೆ ಮಾಹಿತಿ ಪಡೆಯುವುದು. ಈ ಬಗ್ಗೆ ಎಂಟು ಸಭೆಗಳನ್ನು ನಡೆಸಲಾಗಿರುತ್ತದೆ. ರಾಜ್ಯಮಟ್ಟದ ಸಮಿತಿ ಇಲ್ಲದಿರುವ ಕಾರಣ ಪ್ರಕರಣ ಇತ್ಯರ್ಥ ಸಂಬಂಧಿಸಿರುವುದಿಲ್ಲ. |

**ಇ-ಪಸಂಮೀ 319 ಸಲೆವಿ 2024**

**(ಕೆ. ವೆಂಕಟೇಶ್)**
**ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು**

## ಅನುಬಂಧ-1
## ಅಮೃತ ಸ್ವಾಭಿಮಾನಿ ಕುರಿಗಾಹಿ ಯೋಜನೆಯ ರೂಪ-ರೇಷೆಗಳು

1. ರಾಜ್ಯದಲ್ಲಿರುವ ಒಟ್ಟು ಕುರಿ ಮತ್ತು ಉಣ್ಣೆ ಉತ್ಪಾದಕ ಸಹಕಾರ ಸಂಘಗಳ ಪೈಕಿ ಪ್ರತಿ ಜಿಲ್ಲೆಯಲ್ಲಿರುವ ಸಹಕಾರ ಸಂಘಗಳ ಸಂಖ್ಯೆಗೆ ಅನುಗುಣವಾಗಿ ಜಿಲ್ಲಾವಾರು ಗುರಿ ನಿಗಧಿ ಪಡಿಸುವುದು.
2. ಜಿಲ್ಲಾವಾರು ಗುರಿಗಳನ್ನು ಆಯಾ ಜಿಲ್ಲೆಯ ಹೋಬಳಿವಾರು ಅಸ್ತಿತ್ವದಲ್ಲಿರುವ ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘಗಳ ಸದಸ್ಯರ ಸಂಖ್ಯೆಗೆ ಅನುಗುಣವಾಗಿ ಸರ್ಕಾರದ ನಿಯಮಾವಳಿಗಳ ಅನ್ವಯ ವರ್ಗವಾರು ಗುರಿಯನ್ನು ಮರು ನಿಗಧಿ ಪಡಿಸುವುದು.
3. ನಿಗಮದ ಜಿಲ್ಲಾನುಷ್ಠಾನಾಧಿಕಾರಿ ಆಯಾ ತಾಲ್ಲೂಕಿಗೆ ನಿಗಧಿಯಾದ ಗುರಿಗಳ ಪೈಕಿ ಅದಕ್ಕೆ ತಕ್ಕಂತೆ ಅನುದಾನವನ್ನು ಮರು ಹಂಚಿಕೆ ಮಾಡಿ, ಆಯಾ ಜಿಲ್ಲೆಯಲ್ಲಿರುವ ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತದೊಂದಿಗೆ ಸಂಯೋಜನೆಗೊಂಡಿರುವ ಸಂಘಗಳು ಹಾಗೂ ಕರ್ನಾಟಕ ಸಹಕಾರ ಕುರಿ ಮತ್ತು ಮೇಕೆಗಳ ಸಾಕಾಣಿಕೆದಾರರ ಸಂಘಗಳ ಮಹಾ ಮಂಡಳಗಳ ಜೊತೆಗೆ ಷೇರುದಾರರಾಗಿ ನೋಂದಣಿಯಾಗಿರುವ ಸಂಘಗಳ ಮುಖಾಂತರ ಅರ್ಜಿಗಳನ್ನು ಆಹ್ವಾನಿಸುವುದು.
4. ಜಿಲ್ಲಾ ಮಟ್ಟದ ಫಲಾನುಭವಿಗಳ ಆಯ್ಕೆ ಸಮಿತಿ ಸಭೆಯನ್ನು ಸದಸ್ಯ ಕಾರ್ಯದರ್ಶಿಗಳಾದ ನಿಗಮದ ಜಿಲ್ಲಾ ಮಟ್ಟದ ಅನುಷ್ಠಾನಾಧಿಕಾರಿಗಳು ಕರೆದು, ಸ್ವೀಕರಿಸಿದ ಪ್ರವರ್ಗವಾರು ಅರ್ಹ ಫಲಾನುಭವಿಗಳ ಪಟ್ಟಿಯನ್ನು ಯೋಜನೆಯ ಮಾರ್ಗಸೂಚಿಗಳನ್ವಯ ನಿಯಮಾನುಸಾರ ಪರಿಶೀಲಿಸಿ ಅರ್ಹ ಫಲಾನುಭವಿಗಳನ್ನು ಜಿಲ್ಲಾ ಮಟ್ಟದ ಆಯ್ಕೆ ಸಮಿತಿ ಮುಂದೆ ಮಂಡಿಸುವುದು.
5. ಉಪ ನಿರ್ದೇಶಕರು ಜಿಲ್ಲೆಗೆ ನಿಗದಿಯಾದ ಗುರಿಗಳನ್ನು ತಾಲ್ಲೂಕು ಸಹಾಯಕ ನಿರ್ದೇಶಕರು ಮುಖ್ಯ ಪಶುವೈದ್ಯಾಧಿಕಾರಿ (ಆಡಳಿತ) ಇವರಿಂದ ಮಾಹಿತಿ ಪಡೆದು ತಾಲ್ಲೂಕುವಾರು ಜಿಲ್ಲಾ ಲೀಡ್ ಬ್ಯಾಂಕ್ ಮುಖಾಂತರ ಬ್ಯಾಂಕ್‌ವಾರು ಗುರಿ ನಿಗಧಿಪಡಿಸಲು ಕ್ರಮ ವಹಿಸುವುದು.
6. ಫಲಾನುಭವಿಗಳಿಂದ ಸ್ವೀಕರಿಸಿದಂತಹ ವಂತಿಗೆ ಹಣವನ್ನು ಪ್ರತ್ಯೇಕ ಬ್ಯಾಂಕ್ ಖಾತೆಗೆ ಜಮೆ ಮಾಡಿಸಿ, ನಂತರ ಸಹಾಯಧನವನ್ನು ಅದೇ ಖಾತೆಗೆ ಜಮಾ ಮಾಡಿ ಕುರಿ / ಮೇಕೆ ಘಟಕವನ್ನು ಮಾರಾಟ ಮಾಡಿರುವವರಿಗೆ ಪಾವತಿಸಲು ಅನುಷ್ಠಾನಾಧಿಕಾರಿಗಳು ಕ್ರಮವಹಿಸುವುದು.
7. ಮುಖ್ಯ ಪಶುವೈದ್ಯಾಧಿಕಾರಿಗಳು (ಆಡಳಿತ) ವಿಳಂಬವಿಲ್ಲದೇ ಆಯ್ಕೆಯಾದ ಫಲಾನುಭವಿಗಳ ಅರ್ಜಿಯನ್ನು ಅಗತ್ಯ ದಾಖಲೆಗಳೊಂದಿಗೆ ಸಂಬಂಧಿಸಿದ ಪಶುವೈದ್ಯಾಧಿಕಾರಿಗಳ ಮುಖಾಂತರ ಸಾಲ ಮಂಜೂರಾತಿಗಾಗಿ ಬ್ಯಾಂಕ್‌ಗಳಿಗೆ ಸಲ್ಲಿಸುವುದು.
8. ಈ ಯೋಜನೆಯನ್ನು ರಾಷ್ಟ್ರೀಕೃತ ಬ್ಯಾಂಕ್‌ಗಳು, ವಾಣಿಜ್ಯ ಬ್ಯಾಂಕ್ ಹಾಗೂ ಸಹಕಾರಿ ಸಂಘಗಳ ಮುಖಾಂತರವು ಸಹ ಸಾಲ ಮಂಜೂರಾತಿಯೊಂದಿಗೆ ಅನುಷ್ಠಾನಗೊಳಿಸುವುದು.
9. ಸಹಾಯಕ ನಿರ್ದೇಶಕರು ಅಥವಾ ಅನುಷ್ಠಾನಾಧಿಕಾರಿಗಳು ಆಯ್ಕೆಯಾದ ಫಲಾನುಭವಿಗಳ ಸಹಾಯಧನವನ್ನು ಆಯಾ ಬ್ಯಾಂಕ್‌ಗಳಿಗೆ ಬಿಡುಗಡೆಗೊಳಿಸಿ ಯೋಜನೆ ಅನುಷ್ಠಾನಗೊಳಿಸುವುದು.
10. ಫಲಾನುಭವಿಗಳಿಗೆ ಖರೀದಿಸಿದ ಕುರಿ/ಮೇಕೆ ಘಟಕಗಳಿಗೆ ಯುಐಡಿ ಸಂಖ್ಯೆ ಇರುವ ಟ್ಯಾಗ್‌ಗಳನ್ನು ಅಳವಡಿಸಿ, ಫಲಾನುಭವಿ, ಮಾರಾಟಗಾರ, ಬ್ಯಾಂಕ್ ಪ್ರತಿನಿಧಿ ಮತ್ತು ಅನುಷ್ಠಾನಾಧಿಕಾರಿ ಕುರಿ / ಮೇಕೆ ಘಟಕ ಇರುವ ಫೋಟೋವನ್ನು ಎಲ್ಲಾ ವಿವರಗಳೊಂದಿಗೆ ಯೋಜನಾ ವಹಿಯಲ್ಲಿ ದಾಖಲಿಸುವುದು
11. ಫಲಾನುಭವಿಗಳಿಗೆ ಕುರಿ/ಮೇಕೆ ಶೆಡ್ ನಿರ್ಮಾಣಕ್ಕಾಗಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ. (MGNREGA) ಯೋಜನೆಯಡಿ ಅವಕಾಶ ಕಲ್ಪಿಸಲು ಸ್ಥಳೀಯ ಗ್ರಾಮ ಪಂಚಾಯಿತಿ ಪಿ.ಡಿ.ಓ.ಗಳಿಗೆ ಹಾಗೂ ತಾಲ್ಲೂಕು ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಮಾಹಿತಿ ನೀಡುವುದು.
12. ಈ ಯೋಜನೆಯಡಿಯ ಫಲಾನುಭವಿಗಳ ಕುರಿ /ಮೇಕೆ ಘಟಕಗಳಿಗೆ ವಿಮೆಗೊಳಪಡಿಸಲು ಕ್ರಮ ವಹಿಸುವುದು.
13. ಆಯ್ಕೆಯಾದ ಫಲಾನುಭವಿಯು ಯೋಜನೆಯ ಅನುಷ್ಠಾನಕ್ಕೆ ಮೊದಲು ಮರಣ ಹೊಂದಿದಲ್ಲಿ ಅವರ ಅಧಿಕೃತ ವಾರಸುದಾರರಿಗೆ ಈ ಯೋಜನೆಯ ಸವಲತ್ತನ್ನು ನೀಡಲು ಕ್ರಮ ವಹಿಸುವುದು.
14. ಅನುಷ್ಠಾನಾಧಿಕಾರಿಗಳು ಯೋಜನೆಯನ್ನು ಸಂಪೂರ್ಣವಾಗಿ ಅನುಷ್ಠಾನಗೊಳಿಸಿದ ಕೂಡಲೇ ಹಣ ಬಳಕೆ ಪ್ರಮಾಣ ಪತ್ರ ಹಾಗೂ ಪ್ರಗತಿ ವಿವರಗಳನ್ನು ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ ಹಾಗೂ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತಕ್ಕೆ ಸಲ್ಲಿಸಲು ತಪ್ಪದೇ ಕ್ರಮ ವಹಿಸುವುದು.

## ಅನುಬಂಧ -2

## ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ದೊರೆಯುವ ಸೌಲಭ್ಯಗಳ ವಿವರ

| ಕ್ರ. ಸಂ | ವಿವರಗಳು | ಯೋಜನೆಯ ಅನುಷ್ಠಾನಕ್ಕೆ ಮಾದರಿ ನೆರವು | ಪ್ರತಿ ಘಟಕಕ್ಕೆ ಮೊತ್ತ ರೂಗಳಲ್ಲಿ | ಯೋಜನೆಯ ಅನುಷ್ಠಾನಕ್ಕೆ ಒಟ್ಟು (20000 ಫಲಾನುಭವಿಗಳಿಗೆ) ಕೋಟಿ ರೂ.ಗಳಲ್ಲಿ |
|---|---|---|---|---|
| 1 | ರಾಷ್ಟ್ರೀಯ ಸಹಕಾರ ಅಭಿವೃದ್ಧಿ ನಿಗಮದ ವತಿಯಿಂದ ಸಾಲ (NCDC) | 50% | 87500 | 175.00 |
| 2 | ಸರ್ಕಾರದ ಸಹಾಯಧನ ರೂ.87.50 ಕೋಟಿ ಮತ್ತು ಆಡಳಿತಾತ್ಮಕ ವೆಚ್ಚ (5%) ರೂ.4.50 ಕೋಟಿ | 25% | 43750 | 92.00 |
| 3 | ಫಲಾನುಭವಿಯ ವಂತಿಕೆ / ಬ್ಯಾಂಕ್ ಸಾಲ | 25% | 43750 | 87.50 |
| **ಒಟ್ಟು** | | | **175000** | **354.50** |

## ಅನುಬಂಧ- 3

## ರಾಜ್ಯದಲ್ಲಿ ಅಮೃತ ಸ್ವಾಭಿಮಾನಿ ಕುರಿಗಾಹಿ ಯೋಜನೆ ಮತ್ತು ಕುರಿ-ಮೇಕೆ ಸಾಕಾಣಿಕೆ ಯೋಜನೆಗಳ ಅನುಷ್ಠಾನಕ್ಕೆ ಬೇಕಾಗಿರುವ ವ್ಯವಸ್ಥೆಯ ವಿವರ

1. **ಯೋಜನೆಯ ವ್ಯಾಪ್ತಿ:**

ರಾಜ್ಯದಲ್ಲಿರುವ ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘಗಳಿರುವ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗುವುದು.

2. **ಅರ್ಹ ಫಲಾನುಭವಿಗಳು:**

- ಸಂಘವು ಸಹಕಾರ ಸಂಘಗಳ ಕಾಯ್ದೆ 1959 ರ ಅನುಗುಣವಾಗಿ ಕರ್ನಾಟಕ ಸರ್ಕಾರದ ಸಹಕಾರ ಇಲಾಖೆಯಲ್ಲಿ ನೋಂದಣಿ ಯಾಗಿರಬೇಕು.
- ಸಂಘವು, ತನ್ನ ಸಭೆಗಳನ್ನು ನಿರಂತರವಾಗಿ ನಡೆಸಿರಬೇಕು ಹಾಗೂ ವಾರ್ಷಿಕ ಸಾಮಾನ್ಯ ಸಭೆ (AGM) ಹಾಗೂ ಚುನಾವಣಾ ಬೈಲಾ ಹಾಗೂ ಕಾಯ್ದೆಗನುಗುಣವಾಗಿ ನಡೆಸಿರತಕ್ಕದ್ದು.
- ಸಂಘದ ಇತ್ತೀಚಿನ ಮೂರು ವರ್ಷಗಳ ಲೆಕ್ಕ ಪರಿಶೋಧನೆ ಆಗಿರಬೇಕು ಹಾಗೂ ಕ್ರಿಯಾಶೀಲವಾಗಿ ಕಾರ್ಯನಿರ್ವಹಿಸುತ್ತಿರುವ ಬಗ್ಗೆ ಸಹಕಾರ ಇಲಾಖೆ ದೃಢೀಕರಣ ಹೊಂದಿರಬೇಕು.
- ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತದೊಂದಿಗೆ ಸಂಯೋಜನೆಗೊಂಡಿರುವ ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘಗಳಲ್ಲಿನ ಅರ್ಹ ಕುರಿಗಾಹಿ ಸದಸ್ಯರಿಗೆ ಮಾತ್ರ.
- ಕರ್ನಾಟಕ ಸಹಕಾರ ಕುರಿ ಮತ್ತು ಮೇಕೆಗಳ ಸಾಕಾಣಿಕೆದಾರರ ಸಂಘಗಳ ಮಹಾ ಮಂಡಳಗಳ ಜೊತೆಗೆ ಷೇರುದಾರರಾಗಿ ನೋಂದಣಿಯಾಗಿರುವ ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘಗಳಲ್ಲಿನ ಅರ್ಹ ಕುರಿಗಾಹಿ ಸದಸ್ಯರಿಗೆ ಮಾತ್ರ.
- ಸಂಘವು ತನ್ನ ಎಲ್ಲಾ ಸದಸ್ಯರ ಹಾಗೂ ಅವರು ಹೊಂದಿರುವ ಕುರಿ / ಮೇಕೆಗಳ ಕುರಿತಂತೆ ಎಲ್ಲಾ ವಿವರಗಳನ್ನು ಇಲಾಖೆಯು ಒದಗಿಸುವ ನಿಗದಿತ ನಮೂನೆಯಲ್ಲಿ ನೀಡತಕ್ಕದ್ದು.
- ಸದರಿ ಕಾರ್ಯಕ್ರಮದಲ್ಲಿ ಸರ್ಕಾರದ ನಿಯಮಗಳಂತೆ ಮಹಿಳೆಯರಿಗೆ (ಶೇ.33.3), ವಿಶೇಷ ಚೇತನರಿಗೆ (ಶೇ.3) ಆದ್ಯತೆ ನೀಡಲಾಗುವುದು.
- ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ಫಲಾನುಭವಿಗಳು ಜಾತಿ ಪ್ರಮಾಣ ಪತ್ರವನ್ನು ಹೊಂದಿರಬೇಕು (ಪ್ರಮಾಣ ಪತ್ರದಲ್ಲಿ ಆರ್ ಡಿ ನಂ: ಇರಬೇಕು)
- ಅರ್ಜಿದಾರರು ಕಡ್ಡಾಯವಾಗಿ FRUITS ತಂತ್ರಾಂಶದಲ್ಲಿ ನೋಂದಾಯಿಸಿರಬೇಕು.
- ಕುರಿ, ಮೇಕೆಗಳ ಮಾರಾಟ ವ್ಯವಸ್ಥೆ ಕಲ್ಪಿಸುವ NeML Marketing Platform (Online) ನಲ್ಲಿ ನೋಂದಣಿಯಾಗಿರಬೇಕು.
- ಒಂದು ಕುಟುಂಬಕ್ಕೆ ಒಂದೇ ಅರ್ಜಿಯನ್ನು ಸಲ್ಲಿಸತಕ್ಕದ್ದು, ಒಂದಕ್ಕಿಂತ ಹೆಚ್ಚಿನ ಅರ್ಜಿಗಳನ್ನು ಸಲ್ಲಿಸಿದ್ದಲ್ಲಿ ಅಂತಹ ಕುಟುಂಬದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

3. **ಫಲಾನುಭವಿಗಳು ಅರ್ಜಿ ಜೊತೆ ಲಗತ್ತಿಸಬೇಕಾದ ದಾಖಲಾತಿಗಳು:**

- ನಿಗದಿತ ನಮೂನೆಯಲ್ಲಿ ಭಾವಚಿತ್ರದೊಂದಿಗೆ ಅರ್ಜಿ.
- ಸಂಘದ ಇತ್ತೀಚಿನ ಮೂರು ವರ್ಷಗಳ ಲೆಕ್ಕ ಪರಿಶೋಧನೆ ಆಗಿರಬೇಕು ಹಾಗೂ ಕ್ರಿಯಾಶೀಲವಾಗಿ ಕಾರ್ಯನಿರ್ವಹಿಸುತ್ತಿರುವ ಬಗ್ಗೆ ಸಹಕಾರ ಇಲಾಖೆ ದೃಢೀಕರಣ ಹೊಂದಿರಬೇಕು.
- ನೋಂದಾಯಿತ ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘದಲ್ಲಿ ಸದಸ್ಯರಾಗಿರುವ ಬಗ್ಗೆ ಸಂಬಂಧಿಸಿದ ಸಂಘದ ಕಾರ್ಯದರ್ಶಿ ರವರಿಂದ ಪಡೆದ ಸದಸ್ಯತ್ವದ ದೃಢೀಕರಣ ಪತ್ರದ ಪ್ರತಿ.

ಪ್ರತಿ.

- ವಿಶೇಷ ಚೇತನರಾಗಿದ್ದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಕ್ಷಮ ಪ್ರಾಧಿಕಾರವು ನೀಡಿರುವ ದೃಢೀಕರಣ ಪ್ರಮಾಣ ಪತ್ರ.

## 4. ಫಲಾನುಭವಿಗಳ ಆಯ್ಕೆ ವಿಧಾನ

- ನಿಗಮದ ಜಿಲ್ಲಾ ಅನುಷ್ಠಾನಾಧಿಕಾರಿಗಳು ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಲು ಯೋಜನೆಯ ಬಗ್ಗೆ ವ್ಯಾಪಕ ಪ್ರಚಾರ (ಪತ್ರಿಕಾ ಪ್ರಕಟಣೆ) ನೀಡಿ ಜಿಲ್ಲೆಯ ಕುರಿ ಮತ್ತು ಉಣ್ಣೆ ಉತ್ಪಾದಕ ಸಹಕಾರ ಸಂಘಗಳ ಮೂಲಕ ನಿಗದಿತ ನಮೂನೆಯಲ್ಲಿ ಅರ್ಹ ಫಲಾನುಭವಿಗಳಿಂದ ಅರ್ಜಿಯನ್ನು ಆಹ್ವಾನಿಸುವುದು.
- ರಾಜ್ಯದಲ್ಲಿರುವ ಒಟ್ಟು ಕುರಿ ಮತ್ತು ಉಣ್ಣೆ ಉತ್ಪಾದಕ ಸಹಕಾರ ಸಂಘಗಳ ಪೈಕಿ ಪ್ರತಿ ಜಿಲ್ಲೆಯಲ್ಲಿರುವ ಸಹಕಾರ ಸಂಘಗಳ ಸಂಖ್ಯೆಗೆ ಅನುಗುಣವಾಗಿ ಜಿಲ್ಲಾವಾರು ಗುರಿ ನಿಗಧಿ ಪಡಿಸುವುದು
- ಆಯಾ ಜಿಲ್ಲೆಯಲ್ಲಿರುವ ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತದೊಂದಿಗೆ ಸಂಯೋಜನೆಗೊಂಡಿರುವ ಸಂಘಗಳು ಹಾಗೂ ಕರ್ನಾಟಕ ಸಹಕಾರ ಕುರಿ ಮತ್ತು ಮೇಕೆಗಳ ಸಾಕಾಣಿಕೆದಾರರ ಸಂಘಗಳ ಮಹಾ ಮಂಡಳಗಳ ಜೊತೆಗೆ ಷೇರುದಾರರಾಗಿ ನೋಂದಣಿಯಾಗಿರುವ ಸಂಘಗಳು ಜಿಲ್ಲಾವಾರು ನಿಗದಿಪಡಿಸುವ ಗುರಿಗಳನ್ವಯ ಸದಸ್ಯರುಗಳನ್ನು ಆಯ್ಕೆ ಮಾಡುವುದು ಹಾಗೂ ಫಲಾನುಭವಿಗಳ ಪಟ್ಟಿಯನ್ನು ನಿಗಧಿತ ನಮೂನೆ ಮತ್ತು ಅಗತ್ಯ ದಾಖಲಾತಿಗಳೊಂದಿಗೆ ಸಂಬಂಧಪಟ್ಟ ಆಯಾ ಜಿಲ್ಲೆಯ ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತದ ಜಿಲ್ಲಾ ಅನುಷ್ಠಾನಾಧಿಕಾರಿಗಳಿಗೆ ಸಲ್ಲಿಸುವುದು.
- ಜಿಲ್ಲಾವರು ಗುರಿಗಳನ್ನು ಆಯಾ ಜಿಲ್ಲೆಯ ಹೋಬಳಿವಾರು ಅಸ್ತಿತ್ವದಲ್ಲಿರುವ ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘಗಳ ಸದಸ್ಯರ ಸಂಖ್ಯೆಗೆ ಅನುಗುಣವಾಗಿ ಸರ್ಕಾರದ ನಿಯಮಾವಳಿಗಳ ಅನ್ವಯ ವರ್ಗವಾರು ಗುರಿಯನ್ನು ಮರು ನಿಗಧಿ ಪಡಿಸುವುದು
- ಯೋಜನೆಯ ಅನುಷ್ಠಾನಕ್ಕಾಗಿ ಸಂಘದ ಸದಸ್ಯರುಗಳಿಗೆ NCDC ಯಿಂದ ಪಡೆದ ಸಾಲ ಮತ್ತು ಬಡ್ಡಿ ವಸೂಲಾತಿಗೆ ಸಂಬಂಧಿಸಿದಂತೆ ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘಗಳು ಕಡ್ಡಾಯವಾಗಿ ಸಂಬಂಧ ಪಟ್ಟ ಜಿಲ್ಲಾ ಅನುಷ್ಠಾನಾಧಿಕಾರಿಗಳು ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತದೊಂದಿಗೆ ಕರಾರು ಒಪ್ಪಂದವನ್ನು ಮಾಡಿಕೊಳ್ಳತಕ್ಕದ್ದು.

# ಫಲಾನುಭವಿ ಆಯ್ಕೆ ಸಮಿತಿ

| | | |
|---|---|---|
| 1 | ಸಂಬಂಧಿಸಿದ ಜಿಲ್ಲೆಯ ಜಿಲ್ಲಾ ಪಂಚಾಯತ್ ಮುಖ್ಯಕಾರ್ಯನಿರ್ವಹಣಾಧಿಕಾರಿಗಳು | ಅಧ್ಯಕ್ಷರು |
| 2 | ಆಯಾ ಜಿಲ್ಲೆಯ ನಿರ್ದೇಶಕರು, ಕರ್ನಾಟಕ ಸಹಕಾರ ಕುರಿ ಮತ್ತು ಮೇಕೆಗಳ ಸಾಕಾಣಿಕೆ ದಾರರ ಸಂಘಗಳ ಮಹಾ ಮಂಡಳಿ | ಸದಸ್ಯರು |
| 3 | ಸಂಬಂಧಿಸಿದ ಜಿಲ್ಲೆಯ ಉಪ ನಿರ್ದೇಶಕರು (ಆಡಳಿತ) ಪಶು ಪಾಲನಾ ಮತ್ತು ಪಶು ವೈದ್ಯ ಸೇವಾ ಇಲಾಖೆ | ಸದಸ್ಯರು |
| 4 | ಸಂಬಂಧಿಸಿದ ಜಿಲ್ಲೆಯ ವ್ಯವಸ್ಥಾಪಕರು ಲೀಡ್ ಬ್ಯಾಂಕ್ | ಸದಸ್ಯರು |
| 5 | ಸಂಬಂಧಿಸಿದ ಜಿಲ್ಲೆಯ ಸಹಕಾರ ಸಂಘಗಳ ಉಪನಿಬಂಧಕರು ಸಹಕಾರ ಇಲಾಖೆ | ಸದಸ್ಯರು |
| 6 | ಜಿಲ್ಲಾ ಅನುಷ್ಠಾನಾಧಿಕಾರಿಗಳು, ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ, | ಸದಸ್ಯ ಕಾರ್ಯದರ್ಶಿ |

# ಅನುಬಂಧ-4

## 2023-24ನೇ ಸಾಲಿನಲ್ಲಿ ಅಮೃತ ಸ್ವಾಭಿಮಾನಿ ಕುರಿಗಾಹಿ ಯೋಜನೆ ಅನುಷ್ಠಾನಗೊಳಿಸಿದ ಜಿಲ್ಲಾವಾರು ವಿವರ

| ಕ್ರ ಸಂ | ಜಿಲ್ಲೆ | ಅನುಷ್ಠಾನಗೊಳಿಸಿದ ಒಟ್ಟು ಫಲಾನುಭವಿಗಳ ಸಂಖ್ಯೆ | ರಾಜ್ಯ ಸರ್ಕಾರದ ಸಹಾಯಧನ ಬಿಡುಗಡೆ ಮಾಡಿದ ಮೊತ್ತ (ರೂ.ಗಳಲ್ಲಿ) | NCDC ರವರಿಂದ ಸಾಲ ಬಿಡುಗಡೆ ಮಾಡಿದ ಮೊತ್ತ(ರೂ.ಗಳಲ್ಲಿ) | ಒಟ್ಟು ಮೊತ್ತ |
|---|---|---|---|---|---|
| 1 | 2 | 3 | 4 | 5 | 6 |
| 1 | ಬೆಳಗಾವಿ | **1667** | 72931250 | 145862500 | 218793750 |
| 2 | ರಾಯಚೂರು | **143** | 6256250 | 12512500 | 18768750 |
| 3 | ಚಿತ್ರದುರ್ಗ | **561** | 24543750 | 49087500 | 73631250 |
| 4 | ಕಲಬುರ್ಗಿ | **288** | 12600000 | 25200000 | 37800000 |
| 5 | ಬಾಗಲಕೋಟೆ | **509** | 22268750 | 44537500 | 66806250 |
| 6 | ಹಾವೇರಿ | **150** | 6562500 | 13125000 | 19687500 |
| 7 | ಬೀದರ್ | **151** | 6606250 | 13212500 | 19818750 |
| 8 | ಯಾದಗಿರಿ | **339** | 14831250 | 29662500 | 44493750 |
| 9 | ಕೊಪ್ಪಳ | **364** | 15925000 | 31850000 | 47775000 |
| 10 | ತುಮಕೂರು | **364** | 15925000 | 31850000 | 47775000 |
| 11 | ವಿಜಯಪುರ | **89** | 3893750 | 7787500 | 11681250 |
| 12 | ಗದಗ | **139** | 6081250 | 12162500 | 18243750 |
| 13 | ಕೋಲಾರ | **209** | 9143750 | 18287500 | 27431250 |
| 14 | ಮಂಡ್ಯ | **263** | 11506250 | 23012500 | 34518750 |
| 15 | ಮೈಸೂರು | **224** | 9800000 | 19600000 | 29400000 |
| 16 | ಚಿಕ್ಕಬಳ್ಳಾಪುರ | **227** | 9931250 | 19862500 | 29793750 |
| 17 | ಚಾಮರಾಜನಗರ | **203** | 8881250 | 17762500 | 26643750 |
| 18 | ದಾವಣಗೆರೆ | **98** | 4287500 | 8575000 | 12862500 |
| 19 | ವಿಜಯನಗರ | **89** | 3893750 | 7787500 | 11681250 |
| 20 | ಧಾರವಾಡ | **75** | 3281250 | 6562500 | 9843750 |
| 21 | ರಾಮನಗರ | **136** | 5950000 | 11900000 | 17850000 |
| 22 | ಹಾಸನ | **102** | 4462500 | 8925000 | 13387500 |
| 23 | ಬಳ್ಳಾರಿ | **93** | 4068750 | 8137500 | 12206250 |
| 24 | ಶಿವಮೊಗ್ಗ | **99** | 4331250 | 8662500 | 12993750 |
| 25 | ಬೆಂಗಳೂರು ಗ್ರಾ | **68** | 2975000 | 5950000 | 8925000 |
| 26 | ಚಿಕ್ಕಮಗಳೂರು | **0** | 0 | 0 | 0 |
| | **ಒಟ್ಟು** | **6650** | **290937500** | **581875000** | **872812500** |

# ಅನುಬಂಧ-5

## 2024-25ನೇ ಸಾಲಿನಲ್ಲಿ ಅಮೃತ ಸ್ವಾಭಿಮಾನಿ ಕುರಿಗಾಹಿ ಯೋಜನೆ ಅನುಷ್ಠಾನಗೊಳಿಸಿದ ಜಿಲ್ಲಾವಾರು ವಿವರ

| ಕ್ರ ಸಂ | ಜಿಲ್ಲೆ | ಅನುಷ್ಠಾನಗೊಳಿಸಿದ ಒಟ್ಟು ಫಲಾನುಭವಿಗಳ ಸಂಖ್ಯೆ | ರಾಜ್ಯ ಸರ್ಕಾರದ ಸಹಾಯಧನ ಬಿಡುಗಡೆ ಮಾಡಿದ ಮೊತ್ತ (ರೂ.ಗಳಲ್ಲಿ) | NCDC ರವರಿಂದ ಸಾಲ ಬಿಡುಗಡೆ ಮಾಡಿದ ಮೊತ್ತ (ರೂ.ಗಳಲ್ಲಿ) | ಒಟ್ಟು ಮೊತ್ತ |
|---|---|---|---|---|---|
| 1 | 2 | 3 | 4 | 5 | 6 |
| 1 | ಬೆಳಗಾವಿ | 405 | 17718750 | 35437500 | 53156250 |
| 2 | ರಾಯಚೂರು | 94 | 4112500 | 8225000 | 12337500 |
| 3 | ಚಿತ್ರದುರ್ಗ | 105 | 4593750 | 9187500 | 13781250 |
| 4 | ಕಲಬುರ್ಗಿ | 38 | 1662500 | 3325000 | 4987500 |
| 5 | ಬಾಗಲಕೋಟೆ | 12 | 525000 | 1050000 | 1575000 |
| 6 | ಹಾವೇರಿ | 93 | 4068750 | 8137500 | 12206250 |
| 7 | ಬೀದರ್ | 206 | 9012500 | 18025000 | 27037500 |
| 8 | ಯಾದಗಿರಿ | 0 | 0 | 0 | 0 |
| 9 | ಕೊಪ್ಪಳ | 0 | 0 | 0 | 0 |
| 10 | ತುಮಕೂರು | 0 | 0 | 0 | 0 |
| 11 | ವಿಜಯಪುರ | 0 | 0 | 0 | 0 |
| 12 | ಗದಗ | 36 | 1575000 | 3150000 | 4725000 |
| 13 | ಕೋಲಾರ | 30 | 1312500 | 2625000 | 3937500 |
| 14 | ಮಂಡ್ಯ | 0 | 0 | 0 | 0 |
| 15 | ಮೈಸೂರು | 0 | 0 | 0 | 0 |
| 16 | ಚಿಕ್ಕಬಳ್ಳಾಪುರ | 0 | 0 | 0 | 0 |
| 17 | ಚಾಮರಾಜನಗರ | 0 | 0 | 0 | 0 |
| 18 | ದಾವಣಗೆರೆ | 24 | 1050000 | 2100000 | 3150000 |
| 19 | ವಿಜಯನಗರ | 30 | 1312500 | 2625000 | 3937500 |
| 20 | ಧಾರವಾಡ | 57 | 2493750 | 4987500 | 7481250 |
| 21 | ರಾಮನಗರ | 0 | 0 | 0 | 0 |
| 22 | ಹಾಸನ | 8 | 350000 | 700000 | 1050000 |
| 23 | ಬಳ್ಳಾರಿ | 18 | 787500 | 1575000 | 2362500 |
| 24 | ಶಿವಮೊಗ್ಗ | 0 | 0 | 0 | 0 |
| 25 | ಬೆಂಗಳೂರು ಗ್ರಾ | 0 | 0 | 0 | 0 |
| 26 | ಚಿಕ್ಕಮಗಳೂರು | 0 | 0 | 0 | 0 |
| | ಒಟ್ಟು | 1156 | 50575000 | 101150000 | 151725000 |